ಪ್ರಧಾನ ಸಿವಿಲ್?ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ಮದ್ದೂರು.

**ಸಿ.ಸಿ.1145/2017**

| | | |
|---|---|---|
| ಸಾಕ್ಷಿದಾರರ ಹೆಸರು- | ಜೀವನ್ | ಚಾ ಸಾ -1 |
| ತಂದೆಯ ಹೆಸರು - | ಹೊನ್ನೆಗೌಡ | ಪ್ರಾ ಸಾ -1 |
| ವಯಸ್ಸು - | 36 ವರ್ಷ | |
| ಉದ್ಯೋಗ - | ವ್ಯವಸಾಯ | |
| ವಾಸ ಸ್ಥಳ - | ಮರಳಿಗ | |

ದಿನಾಂಕಃ 21.11.2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:ಅಭಿಯೋಜನೆಯ ಪರಃ ಎಪಿಪಿ ಯವರಿಂದ:**

ಚಾಸಾ-2 ಮತ್ತು 3 ರವರು ಗೊತ್ತು, ಆರೋಪಿತರ ಪರಿಚಯವಿರುತ್ತದೆ.

ದಿ.21.10.2016 ರಂದು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ನಾನು ಪಂಚಾಯತಿ ಕಛೇರಿಗೆ ಹೋಗಿ ನನ್ನ ಕೆಲಸ ಮಾಡಿಕೊಂಡು ವಾಪಸ್ಸು ಬರುತ್ತಿದ್ದಾಗ 1 ಮತ್ತು 2 ನೇ ಆರೋಪಿತರು ಬಿರೇಶ್ವರ ಚೆನ್ನಕೇಶವ ದೇವಸ್ಥಾನದ ವಿಚಾರವಾಗಿಏಕೆ ಬರುತ್ತಿದ್ದೀಯಾ, ಕೆರೆ ಬಾವಿಯ ಕಳಪೆ ಕಾಮಗಾರಿ ಮಾಡಿರುತ್ತಾರೆಂದು ಯಾಕೆ ಅರ್ಜಿ ಕೊಟ್ಟಿದ್ದೀಯಾ ಎಂದು ಹೇಳಿ ಚೇರಿನಿಂದ ನನ್ನ ತಲೆಗೆ 1 ನೇ ಆರೋಪಿ ಹೊಡೆದಿರುತ್ತಾರೆ. 2 ನೇ ಆರೋಪಿ ರೀಪೀಸ್ ಪಟ್ಟಿಯಿಂದ ನನ್ನ ಬೆನ್ನಿಗೆ ಹೊಡೆದಿರುತ್ತಾರೆ. ನನಗೆ ರಕ್ತಗಾಯವಾಗಿರುತ್ತದೆ. ಚಾಸಾ-2 ರವರು ಗಲಾಟೆ ಬಿಡಿಸಿರುತ್ತಾರೆ ಮತ್ತು ಅಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ನಂತರ ಮದ್ದೂರು ಅಸ್ಪತ್ರೆಗೆ ಹೋಗಿರುತ್ತೇವೆ. ವೈದ್ಯರು ಸಿಟಿ ಸ್ಕ್ಯಾನ್ ಮಾಡಿಸಲು ಬರೆದುಕೊಟ್ಟರು ನಾನು ಸಿಟಿ ಸ್ಕ್ಯಾನ್ ಮಾಡಿಸಿಕೊಂಡು ಅಸ್ಪತೆರಗೆ ಹೋಗಿ ನಂತರ ಬಂದು ದೂರು ಕೊಡಲು ಸಂಜೆ ಸುಮಾರು 7.30 ಗಂಟೆಯಾಗಿರುತ್ತದೆ.

ಈಗ ನೋಡುತ್ತಿರುವ ಸಹಿ ನನ್ನದೇ. ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ ಮೇರೆಗೆ ದೂರನ್ನು ನಿಪಿ-1 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಚೇರಿನ ತುಂಡು ಮತ್ತು ರಿಪೀಸ್ ಪಟ್ಟಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಅನುಕ್ರಮವಾಗಿ ಮು.ಮಾ.1 ಮತ್ತು 2 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ.

**(**ಈ ಹಂತದಲ್ಲಿ ಮಾನ್ಯ ಎ ಪಿ ಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ**.** ಅನುಮತಿ ನೀಡಲಾಯಿತು**.)**

ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದಃ

ನಾನು ಕೆಲಸ ಮುಗಿಸಿಕೊಂಡು ಸದರಿ ದಿನ ವಾಪಸ್ಸು ಬರುತ್ತಿದ್ದಾಗ ಆರೋಪಿತರು ನನ್ನನ್ನು ಅಕ್ರಮ ತಡೆಗಟ್ಟಿರುತ್ತಾರೆ ಎಂದರೆ ಸರಿ. ನನ್ನನ್ನು ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ. ಚಾಸಾ-2 ರವರು ಗಲಾಟೆ ಬಿಡಿಸಿದಾಗ ಆರೋಪಿತರು ಈ ದಿನ ಬದುಕಿಕೊಂಡೇ, ಇನ್ನೊಂದು ದಿನ ಗತಿ ಕಾಣಿಸುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿ.

ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ಶ್ರೀ**?NN** ವಕೀಲರಿಂದಃ

ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ರೂ**.300/-** ರೂ**.** ಖರ್ಚು ವಿಧಿಸಿ ನೀಡಲಾಯಿತು**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ